ತುಂಬ ಇದೆ. ಈಗ ತೆಗೆದುಕೊಂಡಿರುವ ಕಟ್ಟಡಗಳನ್ನು ಪೂರೈಸುವುದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಮತ್ತು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಮತ್ತು ಪಿ ಡಬ್ಲ್ಯೂ.ಡಿ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲಾಗುವುದು.

ಶ್ರೀ ಬಿ. ಎಂ. ಇದಿನಬ್ಬ.—ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಕಡೆ ಶಾಲೆಗಳು ಜೋಪಡಿಗಳಲ್ಲಿ ಕಡೆಯಂತ್ತಾ ಉಂಟು. ಇದರ ಬಗ್ಗೆ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ತಾಲಾ ಕಟ್ಟಡಗಳನ್ನು ಶೀಘ್ರವಾಗಿ ನಾಡಷ್ಟಂತೆ ವ್ಯವಸ್ಥೆ ಮಾಡಬೇಕು ಎಂದು ತಮ್ಮ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಆಯ ನಿಜ. ಪ್ರೈಮರಿ ಶಾಲೆಗಳು ನಡೆಯುತ್ತಿರುವ ಕಟ್ಟಡಗಳು ಸರಿಯಾದ ರೀತಿಯಲ್ಲಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆ. ಈ ವರ್ಷ ಆರ್ಥಿಕ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲದೇ ಇರುವುದರಿಂದ ಬರುವ ವರ್ಷ ಈ ಕೆಲಸವನ್ನು ಕೈಗೊಳ್ಳುತ್ತೇವೆ. ಈಗ ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳನ್ನು ಶೀಘ್ರವಾಗಿ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಉಚಿತ ಪುಸ್ತಕಗಳ ಸರಬರಾಜು

೧೦೩೫. ಶ್ರೀ ಬಿ.ಎಚ್. ಯಂಕಾನಾಯಕ್ (ಹರಪನ ಹಳ್ಳಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಾಥಮಿಕ ಶಾಲೆಯ ಒಂದು ಮತ್ತು ಎರಡನೇ ವರ್ಗದ ಮಕ್ಕಳಿಗೆ ಒದಗಿಸಿದ ಪುಸ್ತಕಗಳು ಒಂದೆರಡು ತಿಂಗಳಲ್ಲಿ ಹರಿದು ಹೋಗುವ ಸಾಧ್ಯತೆ ಹೆಚ್ಚಿರುವುದರಿಂದ ಮುಂದೆ ವರ್ಷ ಪೂರ್ತಿ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಆಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಅವಶ್ಯಕವಿದ್ದಲ್ಲಿ, ಅಧಿಕ ಪುಸ್ತಕಗಳನ್ನು ಜಿಲ್ಲಾ ಪುಸ್ತಕ ಮಳಿಗೆಗಳಲ್ಲಿ ಮತ್ತು ತಾಲ್ಲೂಕ್ ಸಹಾಯಕ ವಿದ್ಯಾಧಿಕಾರಿಗಳ ಪುಸ್ತಕ ಮಾರಾಟ ಮಳಿಗೆಗಳ ಮೂಲಕ ಒದಗಿಸುವ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಬಿ.ಹೆಚ್. ಯಂಕಾನಾಯ್ಕ.—ಈಗಾಗಲೇ ಮೂರು ತಿಂಗಳಾಯಿತು. ಹಳ್ಳಿಗಳಿಗೆ ಪುಸ್ತಕಗಳು ತಲುಪಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಂ. ರಘುಪತಿ.—ಯಾವುದಾದರೂ ಇಂತಹ ಶಾಲೆಗೆ ಪುಸ್ತಕಗಳು ಬರಲಿಲ್ಲವೆಂದು ತಾವು ನಿಗದಿಯಾಗಿ ತಿಳಿಸಿಲ್ಲ. ತಾವು ಸುಮ್ಮನೆ ಏನೋ ಹೇಳಿದರೆ, ಅದಕ್ಕೆ ಉತ್ತರ ಕೊಡುವುದಕ್ಕೆ ನಾನು ತಯಾರಿಲ್ಲ. ಎಲ್ಲಾ ಶಾಲೆಗಳಿಗೂ ಪುಸ್ತಕ ಹೋಗಿದೆ. ಇಂತಹ ಶಾಲೆಗಳಿಗೆ ಪುಸ್ತಕಗಳು ಬಂದಿಲ್ಲವೆಂಬ ನಿರವಾದ ಮಾಹಿತಿಯನ್ನು ಕೊಟ್ಟರೆ, ಡಿ. ಡಿ. ಪಿ. ಐ. ಅವರನ್ನು ಅಲ್ಲಿಗೆ ಕಳಿಸಿ ಪುಸ್ತಕ ಸರಬರಾಜು ಮಾಡುವುದಕ್ಕೆ ಹೇಳುತ್ತೇನೆ. ಒಂದು, ಎರಡನೇ ತರಗತಿಯ ಮಕ್ಕಳು ಒಂದೆರಡು ತಿಂಗಳಲ್ಲಿ ಪುಸ್ತಕಗಳು ಹರಿದು ಹೋಗುವ ಸಾಧ್ಯತೆ ಇದೆಯೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಮಕ್ಕಳು ಹರಿದು ಹಾಕಿದರೆ, ಅವರಿಗೆ ಪುಕ್ಕಟೆಯಾಗಿ ಕೊಡುವುದಿಲ್ಲ.

ಶ್ರೀ ಬಿ.ಹೆಚ್. ಯಂಕನಾಯ್ಕ.—ರಾಮಗೊಟ್ಟ, ತಾಂಡ, ಮಾರ್ಚ್ ಹಳ್ಳಿ ತಾಂಡ ಮುಂತಾದ ಹಳ್ಳಿಗಳಲ್ಲಿ ಪುಸ್ತಕ ಸರಬರಾಜು ಸರಿಯಾಗಿರುವುದಿಲ್ಲ. ನಾನು ವಿಸಿಟ್ ಮಾಡಿದಾಗ, ಒಂದನೆಯ ಮತ್ತು ಎರಡನೆಯ ತರಗತಿಯ ಮಕ್ಕಳಲ್ಲಿ ಪುಸ್ತಕಗಳು ಹರಿದು ಹೋಗಿವೆ. ಅಂಗಡಿಗಳಲ್ಲಿ ಅವು ಸಿಗುವುದಿಲ್ಲವೆಂದು ಹೇಳಿದರು. ಇದಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ಅಂತಹ ಪುಸ್ತಕಗಳನ್ನು ಮಾರಾಟ ಮಾಡುವುದಕ್ಕೆ ಏರ್ಪಾಡು ಮಾಡುತ್ತಿದ್ದೇವೆ. ಒಂದು ಸಾರಿ ಕೊಟ್ಟ ಮೇಲೆ, ಹರಿದು ಹೋದರೆ, ಅವರು ಕೊಂಡುಕೊಳ್ಳ

ಬೇಕೆ ಹೊರತು ನಾವು ಪಂಕ್ತಿ ಪುಕ್ಕಟೆಯಾಗಿ ಕೊಡುವುದಿಲ್ಲ. ಅಂಗಡಿಗಳಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಹೆಚ್. ಯಂಕನಾಯ್ಕ.—ಅದೇ ಪುಸ್ತಕಗಳನ್ನು ತಾವು ಸಬ್ಸಿಡಿ ಮೇಲೆ ಕೊಟ್ಟರೆ, ಅವರು ತೆಗೆದುಕೊಳ್ಳುವುದಕ್ಕೆ ತಯಾರಿದ್ದಾರೆ.

ಶ್ರೀ ಎಂ. ರಘುಪತಿ.—ಇದಕ್ಕೆ ಸಬ್ಸಿಡಿ ಕೊಡುವುದಿಲ್ಲ. ಬೇಕಾದರೆ, ತಾಲ್ಲೂಕು ಸೊಸೈಟಿಗಳಲ್ಲಿ ಪುಸ್ತಕಗಳು ಎಷ್ಟು ಬೇಕೆಂದು ಇಂಡೆಂಟ್ ಮಾಡಿದರೆ, ಅಷ್ಟನ್ನು ಸೊಸೈಟಿಗೆ ಕೊಡುತ್ತೇವೆ. ಅವರು ದುಡ್ಡು ಕೊಟ್ಟು ಕೊಂಡುಕೊಳ್ಳಬಹುದು.

ಶ್ರೀ ಬಿ.ಹೆಚ್. ಯಂಕನಾಯ್ಕ.—ಬೇಕೆಂದು ಕೇಳುವವರು ಯಾರು ? ಸೊಸೈಟಿಗಳಿಗೆ ಕೊಡಿ. ಅದಕ್ಕೆ ಸಬ್ಸಿಡಿ ಕೊಡುತ್ತೀರಾ ?

ಶ್ರೀ ಎಂ. ರಘುಪತಿ.—ಸಬ್ಸಿಡಿ ಕೊಡುವುದಕ್ಕೆ ಸಾಧ್ಯವಿಲ್ಲ.

೧೮೮೦. ಶ್ರೀ ವೀರಯ್ಯ ಸ್ವಾಮಿ.—

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಒಬ್ಬ ಮಾನ್ಯ ಸದಸ್ಯರು.—ಶ್ರೀ ವೀರಯ್ಯ ಸ್ವಾಮಿಯವರ ಪರವಾಗಿ ನಾನೂ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ತಮಗೆ ಅಥಾರಿಟಿ ಲೆಟರ್ ಇದೆಯೇ

ಮಾನ್ಯ ಸದಸ್ಯರು.—ಇಲ್ಲ.

ಅಧ್ಯಕ್ಷರು.—ಸಾಧ್ಯವಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಈ ಪ್ರಶ್ನೆಯನ್ನು ತಾವೇ ಹಾಕಬಹುದು.

ಅಧ್ಯಕ್ಷರು.—ಈ ಸಂಪ್ರದಾಯ ಹಾಕುವುದು ಬೇಡ.

೧೮೮೦. ಶ್ರೀ ಕೆ. ವೆಂಕಟೇಶ್.—

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

DISBURSEMENT OF SALARY TO THE TAMIL TEACHERS IN SULLIA

769 SRI K. KUSHALA (Sullia).—Will the Minister of State for Primary and Adult Education will be pleased to state.

a) How many Tamil Teachers are working in Model Higher Primary School, Sullia Tq., D.K. District, and from which date they are working ?

b) Whether, the salary is being disubursed to them ?

c) If not, what are the reasons for it and when the salary will be sanctioned ?

SRI H. G. GOVINDEGOWDA Hon'ble Minister for Primary and Adult Education.—

a) Two.

b) They are working from 9-12-1972 and 22-10-1982 respectively.